# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಡಿ-1380/2018/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 23/7/2018

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

**ವಿಷಯ:** ಶ್ರೀ.ರಾಜಣ್ಣ, ಮೇಸ್ತ್ರಿ, ಬೆಸ್ಕಾಂ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, ಇವರ ವಿರುದ್ಧದ ನಡವಳಿ ಕುರಿತು.

******

1) ಶ್ರೀ.ಹೆಚ್.ಆರ್.ತಿಮ್ಮೇಶ್, ಹಿರೇಬಿದನೂರು, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ರವರು ಶ್ರೀ.ರಾಜಣ್ಣ, ಮೇಸ್ತ್ರಿ, ಬೆಸ್ಕಾಂ, ಗೌರಿಬಿದನೂರು ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ಕರ್ತವ್ಯಲೋಪ ಮತ್ತು ಭ್ರಷ್ಟಾಚಾರದ ಆರೋಪ ಮಾಡಿ ಸಲ್ಲಿಸಿದ ದೂರಿನ ಮೇರೆಗೆ, ಗೌರವಾನ್ವಿತ ಉಪಲೋಕಾಯುಕ್ತರವರು ದತ್ತವಾದ ಅಧಿಕಾರ ಚಲಾಯಿಸಿ, ಸ್ವಯಂಪ್ರೇರಿತ ದೂರನ್ನು ದಾಖಲಿಸಿಕೊಂಡು ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2) ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ಸುಮಾರು 20 ವರ್ಷಗಳಿಂದ ಹಿರೇಬಿದನೂರು ಕ್ಯಾಂಪ್‌ನಲ್ಲಿ ಅಕ್ರಮವಾಗಿ ಕಂಬಗಳನ್ನು ಸ್ಥಳಾಂತರ ಮಾಡಿದ್ದು, ಅಕ್ರಮವಾಗಿ ಕರೆಂಟನ್ನು ಬೋರ್‌ವೆಲ್‌ನಿಂದ ಟ್ಯಾಂಕರುಗಳಿಗೆ ನೀಡುತ್ತಿರುತ್ತಾರೆ. ಈತನು ಅಧಿಕಾರಿಗಳೊಂದಿಗೆ ಶಾಮೀಲಾಗಿ ಗ್ರಾಹಕರಿಗೆ ತೊಂದರೆ ನೀಡುವುದಲ್ಲದೆ ಅಕ್ರಮವಾಗಿ 3 ಕೋಟಿಗೂ ಅಧಿಕ ಆಸ್ತಿ ಮತ್ತು ಬಂಗಾರವನ್ನು ಸಂಪಾದನೆ ಮಾಡಿದ್ದು, ಅಕ್ರಮವಾಗಿ ಸಂಪಾದನೆ ಮಾಡಿರುವ ಆಸ್ತಿಯನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬೇಕೆಂದು ಕೋರಿರುತ್ತಾರೆ.

3) ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಗೌರವಾನ್ವಿತ ಲೋಕಾಯುಕ್ತರು ಎ.ಡಿ.ಜಿ.ಪಿ. ಕರ್ನಾಟಕ ಲೋಕಾಯುಕ್ತ, ಇವರಿಗೆ ಸೂಚಿಸಿದ್ದು, ಆ ಪ್ರಕಾರ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ ಇವರು ಪೊಲೀಸ್ ನಿರೀಕ್ಷಕರ ಮೂಲಕ ತನಿಖೆ ನಡೆಸಿ ವರದಿಯನ್ನು ಸಲ್ಲಿಸಿರುತ್ತಾರೆ.

4) ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ, ಚಿಕ್ಕಬಳ್ಳಾಪುರ ಇವರ ವರದಿಯನ್ನು ಪರಿಶೀಲಿಸಿದಾಗ, ಅವರು ಈ ಕೆಳಗಿನಂತೆ ಅಭಿಪ್ರಾಯ ನೀಡಿರುವುದು ಕಂಡುಬರುತ್ತದೆ.

"ಗೌರಿಬಿದನೂರು ತಾಲ್ಲೂಕಿನ ಹಿರೇಬಿದನೂರು ಬೆಸ್ಕಾಂ ಕ್ಯಾಂಪಿನಲ್ಲಿ ಮೇಸ್ತ್ರಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ರಾಜಣ್ಣನವರು ಅಕ್ರಮ ಆಸ್ತಿ ಮಾಡಿರುವುದು ಗೌಪ್ಯ ವಿಚಾರಣೆಯಲ್ಲಿ ಮೇಲ್ನೋಟಕ್ಕೆ ಕಂಡುಬಂದಿರುವುದಿಲ್ಲ. ಆದರೆ, ಇವರು ತಮ್ಮ ಹೆಸರಿನಲ್ಲಿ ಖರೀದಿಸಿರುವ 5 ಗುಂಟೆ ಜಮೀನು ಮತ್ತು ಒಂದು ಖಾಲಿ ನಿವೇಶನ ಹಾಗೂ ಪತ್ನಿಯ ಹೆಸರಿನಲ್ಲಿ ಖರೀದಿಸಿರುವ ಮತ್ತೊಂದು ಖಾಲಿ ನಿವೇಶನಗಳ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಇಲಾಖೆಯಿಂದ ಅನುಮತಿಯನ್ನು ಪಡೆಯದೆ ಆಸ್ತಿಯನ್ನು ಖರೀದಿಸಿ ಸೇವಾ ನಿಯಮಗಳನ್ನು ಉಲ್ಲಂಘಿಸಿರುತ್ತಾರೆ" ಎಂದು ವರದಿಯನ್ನು ನೀಡಿರುತ್ತಾರೆ. ಆದ್ದರಿಂದ, ತನಿಖಾಧಿಕಾರಿಯ ವರದಿಯ ಮೇಲೆ ಆಕ್ಷೇಪಣೆ ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು.

5) ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ದೂರುದಾರರು ಸಲ್ಲಿಸಿರುವ ದೂರು ಊರ್ಜಿತವಾಗತಕ್ಕದ್ದಲ್ಲ. ದೂರುದಾರರು ಅಪರಿಚಿತ ವ್ಯಕ್ತಿಯಾಗಿದ್ದು, ಅವರಿಗೆ ದೂರನ್ನು ಸಲ್ಲಿಸಲು ಯಾವುದೇ ಅಧಿಕಾರ ಇರುವುದಿಲ್ಲ. ಅವರು ಯಾವುದೇ ಅಕ್ರಮ ಆಸ್ತಿಯನ್ನು ಸಂಪಾದಿಸಿರುವುದಿಲ್ಲ. ಮನೆಯನ್ನು ಕಟ್ಟುವ ಸಲುವಾಗಿ ಸ್ಥಿರಾಸ್ತಿಯನ್ನು ಖರೀದಿಸಿದ್ದು, ಎದುರುದಾರರ ಸಂಬಳದಿಂದ ಬಂದ ಉಳಿತಾಯದಿಂದ ಹಾಗೂ ಅವರ ಮಕ್ಕಳು ಪ್ರಾಪ್ತ ವಯಸ್ಕರಾಗಿದ್ದು, ಉದ್ಯೋಗದಲ್ಲಿರುವುದರಿಂದ, ಅವರ ಆದಾಯದಿಂದ ಸ್ಥಿರಾಸ್ತಿಗಳನ್ನು ಖರೀದಿಸಲಾಗಿದೆ. ಸ್ಥಿರಾಸ್ತಿಗಳನ್ನು ಖರೀದಿಸಿರುವ ಬಗ್ಗೆ ಇಲಾಖೆಗೆ ಯಾವುದೇ ಮಾಹಿತಿಯನ್ನು ನೀಡಿರುವುದಿಲ್ಲ. ಯಾಕೆಂದರೆ ಅವರು 'ಡಿ' ಗ್ರೂಪ್ ನೌಕರರಾಗಿದ್ದು, ಮಾಹಿತಿಯನ್ನು ನೀಡುವ ಅಗತ್ಯ ಇಲ್ಲವಾಗಿರುತ್ತದೆ. ಆದ್ದರಿಂದ, ದೂರುದಾರರು ಸಲ್ಲಿಸಿರುವ ದೂರು ಸತ್ಯಕ್ಕೆ ದೂರವಾಗಿರುತ್ತದೆಯೆಂದು ಹೇಳಿರುತ್ತಾರೆ.

6) ತನಿಖಾಧಿಕಾರಿಯ ವರದಿಯನ್ನು ಪರಿಶೀಲಿಸಿದಾಗ, ಎದುರುದಾರರು ಅವರ ಹೆಸರಿನಲ್ಲಿ ಮತ್ತು ಅವರ ಪತ್ನಿಯ ಹೆಸರಿನಲ್ಲಿ ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಇಲಾಖೆಯಿಂದ ಅನುಮತಿಯನ್ನು ಪಡೆಯದೆ ಸೇವಾ ನಿಯಮಗಳನ್ನು ಉಲ್ಲಂಘಿಸಿರುತ್ತಾರೆಂದು ಅಭಿಪ್ರಾಯ ನೀಡಿರುವುದು ಕಂಡುಬರುತ್ತದೆ. ಈ ಹಂತದಲ್ಲಿ KEB/KPTCL EMPLOYEES SERVICES (CONDUCT) REGULATIONS ನಿಯಮ 23 ನ್ನು ಗಮನಿಸುವುದು ಸೂಕ್ತವೆಂದು ಕಂಡುಬರುತ್ತದೆ.

23. MOVEABLE, IMMOVEABLE AND VALABLE PROPERTY . (1) Every Corporation employee shall on his first appointment to any service or post and thereafter at the interval of every twelve months, submit a return of

his assets and liabilities such form as may be prescribed by the Corporation (Annexure-A) giving the full particulars regarding :-

(a) The immovable property inherited by him, or owned or acquired by him, or held by him on lease or mortgage, either in his own name or in the name of any member of his family or in the name of any other person.

(b) Stocks (shares), debentures and cash including bank deposits inherited by him or similarly owned, acquired or held by him.

(c) Other moveable property inherited by him or similarly owned, acquired or held by him.

(d) Debts or other liabilities incurred by him directly or indirectly.

Note – 1 : Sub-regulation (1) shall not ordinarily apply to Group-D employees but the Corporation may direct that it shall apply to any such Corporation employee or group of such Corporation employees.

Note - 2 : In all returns, the value of items of moveable property worth less than Rs. 2,000/- may be added and shown as a lump-sum. The value of articles of daily use such as clothes, utensils, crockery or books need not be included in such return.

Note - 3 : Every Corporation employee who is in service on the date of the commencement of the regulations shall submit a return under this regulation on or before such date as may be specified by the Corporation after such commencement.

(2) No Corporation employee shall, except with the previous knowledge of the prescribed authority acquire or dispose of any Page 23 of 38 immovable property by lease, mortgage, purchase, sale, gift or otherwise either in his own name or in the name of any member of his family.

Provided that the previous sanction of the prescribed authority shall be obtained by the Corporation employee if any such transaction is :-

(i) with a person having official dealings with the Corporation employee. or

(ii) Other wise than through a regular or reputed dealer.

(3) Every Corporation employee shall report to the prescribed authority every transaction concerning moveable property owned or held by him either in his own name or in the name of the member of his family, if the value of such property exceeds Rs. 5,000/- in the case of a Corporation employee

holding any Group-'A' or Group-'B' post or Rs. 3,000/- in the case of an employee holding any Group-'C' or Group-'D' post.

(i) with a person having official dealings with the Corporation employee; or

(ii) Other wise than through a regular or reputed dealer.

7) ಮೇಲಿನ ಅಂಶವನ್ನು ಗಮನಿಸಿದಾಗ, ಎದುರುದಾರರ ಹೆಸರಿನಲ್ಲಿರುವ ಹಿರೇಬಿದನೂರು ಸ.ನಂ.82/4 ರಲ್ಲಿ 0.05 ಗುಂಟೆ ಜಮೀನು, ಹಿರೇಬಿದನೂರು ಪಂಚಾಯ್ತಿಗೆ ಸೇರಿದ ಅಸೆಸ್‌ಮೆಂಟ್ ನಂ.293 ರ ಸೈಟ್ ನಂ.3 ರ 30*35 ರ ಖಾಲಿ ನಿವೇಶನ ಹಾಗೂ ಎದುರುದಾರರ ಪತ್ನಿಯ ಹೆಸರಿನಲ್ಲಿ ಖರೀದಿಸಿರುವ ಹಿರೇಬಿದನೂರು ಗ್ರಾಮ ಪಂಚಾಯ್ತಿಯ ಅಸೆಸ್‌ಮೆಂಟ್ ನಂ.2271/48 ರ ಖಾಲಿ ನಿವೇಶನ ಸಂ.48 ರಲ್ಲಿ ಪೂ.ಪ. 9.14 ಮೀಟರ್ ಉ.ದ. 12.15 ಮೀಟರ್ ವಿಸ್ತೀರ್ಣದ ನಿವೇಶನವನ್ನು ಖರೀದಿಸಿರುವ ವಿಚಾರವನ್ನು ಇಲಾಖೆಯ ಗಮನಕ್ಕೆ ತಂದಿರುವುದು ಕಂಡುಬರುತ್ತಿಲ್ಲ ಮತ್ತು ಸದರಿ ಸ್ವತ್ತನ್ನು ಖರೀದಿಸಲು ಯಾವ ಆದಾಯದ ಮೂಲವನ್ನು ಬಳಸಿಕೊಳ್ಳಲಾಗಿದೆಯೆನ್ನುವ ಬಗ್ಗೆ ದಾಖಲಾತಿಗಳನ್ನು ಕೂಡ ಹಾಜರು ಪಡಿಸಿರುವುದಿಲ್ಲ. ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ಎದುರುದಾರರು ಕೆ.ಇ.ಬಿ.ನೌಕರರ ಸೇವಾ (ನಡತೆ) ಕಾಯಿದೆ 1988 ರ ನಿಯಮ 23(2) ನ್ನು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ. ಆದ್ದರಿಂದ, ಎದುರುದಾರರಾದ ಶ್ರೀ.ರಾಜಣ್ಣ ಇವರು ಕರ್ತವ್ಯಲೋಪ ಎಸಗಿ, ಸೇವಾ ನಿಯಮಗಳನ್ನು ಉಲ್ಲಂಘನೆ ಮಾಡಿರುವುದು ಮೇಲ್ನೋಕ್ಕೆ ಕಂಡುಬರುತ್ತದೆ. ಆ ಕಾರಣ ಎದುರುದಾರರು ಶಿಸ್ತು ಕ್ರಮಕ್ಕೆ ಬಾಧ್ಯಸ್ಥರಾಗಿರುತ್ತಾರೆ.

8) ಆದುದರಿಂದ, ಎದುರುದಾರರಾದ ಶ್ರೀ.ರಾಜಣ್ಣ ಇವರ ಆಕ್ಷೇಪಣೆಯು ಅವರ ಮೇಲಿನ ಆಪಾದನೆಯನ್ನು ಅಲ್ಲಗಳೆಯಲು ಸೂಕ್ತ ಅಥವಾ ಸಮಾಧಾನಕರವಾಗಿರುವುದಿಲ್ಲ ಮತ್ತು ದೂರುದಾರರ ದೂರನ್ನು ಹಾಗೂ ತನಿಖಾಧಿಕಾರಿಯ ವರದಿಯನ್ನು ಅಲ್ಲಗಳೆಯಲು ಯಾವುದೇ ಸಮಂಜಸ/ಸಮರ್ಪಕ ಉತ್ತರವನ್ನು ತಮ್ಮ ಆಕ್ಷೇಪಣೆಯಲ್ಲಿ ನೀಡಿಲ್ಲವೆಂಬ ಅಭಿಪ್ರಾಯಕ್ಕೆ ಬಂದಿದೆ.

9) ಎದುರುದಾರೆರಾದ ಶ್ರೀ.ರಾಜಣ್ಣ ಇವರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ಕೆ.ಇ.ಬಿ.ಸೇವಾ ನಿಯಮಗಳನ್ನು ಉಲ್ಲಂಘನೆ ಮಾಡಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕೆ.ಇ.ಬಿ.ನೌಕರರ ಸೇವಾ (ನಡತೆ) ಕಾಯಿದೆ 1988 ರ ನಿಯಮ 3(1) ರನ್ವಯ ಶಿಸ್ತು ಕ್ರಮಕ್ಕೆ

ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕೆ.ಇ.ಬಿ. ನೌಕರರ (ವರ್ಗೀಕರಣ, ಶಿಸ್ತು ನಿಯಂತ್ರಣ ಮತ್ತು ಮೇಲ್ಮನವಿ) ಕಾಯಿದೆ, 1987 ರ ನಿಯಮ 14–ಎ (1)(ಎ)(i) ರ ಅಡಿಯಲ್ಲಿ, ಎದುರುದಾರರಾದ ಶ್ರೀ.ರಾಜಣ್ಣ ಇವರ ವಿರುದ್ಧ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

10) ಮುಂದುವರೆದು, **ಎದುರುದಾರರಾದ ಶ್ರೀ.ರಾಜಣ್ಣ ಇವರು ದಿ.31/7/2018 ರಂದು ಸೇವೆಯಿಂದ ನಿವೃತ್ತಿ ಹೊಂದುತ್ತಿರುವುದರಿಂದ** ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಒಂದು ವಾರದೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

**(ನ್ಯಾಯಮೂರ್ತಿ ಎನ್.ಆನಂದ್)**
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**